**ದಿನಾಂಕಃ 11-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ.ಸ್., ಪ್ರತಿವಾದಿ ಪರ ವಕೀಲರಿಂದ**

2005 ರಲ್ಲಿ ದಾವಾ ಸ್ವತ್ತು ವಿಭಾಗ ಮಾಡಿಕೊಂಡಿರುತ್ತೇವೆ. ನೆಲಮಹಡಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. 2011 ರಲ್ಲಿ ಸದರಿ ಪರವಾನಿಗೆಯನ್ನು ನೀಡಿದ್ದು, ಎಷ್ಟು ವಿಸ್ತೀರ್ಣ ಎಂದು ನೆನಪಿಲ್ಲ. ದಿನಾಂಕ, ತಿಂಗಳು ನೆನಪಿಲ್ಲ. ಮುನಿಸಿಪಾಲಿಟಿ , ಚಳ್ಳಕೆರೆ ಹಾಗೂ ಟೌನ್ ಪ್ಲಾನಿಂಗ್ ಕಚೇರಿ, ಚಿತ್ರದುರ್ಗ ರವರಿಂದ ಸದರಿ ಪರವಾನಿಗೆಯನ್ನು ಪಡೆದಿರುತ್ತೇವೆ. ಮನೆಯನ್ನು ನಿರ್ಮಿಸಲು ಸುತ್ತಲೂ 5 ಅಡಿ ಜಾಗವನ್ನು ಬಿಡಬೇಕೆಂದು ಪರವಾನಿಗೆಯಲ್ಲಿ ಹೇಳಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಮನೆ ನಿರ್ಮಿಸಲು ಸುತ್ತಲೂ ಕನಿಷ್ಟ 3 ಅಡಿ ಜಾಗವನ್ನು ಬಿಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು 1½ ಅಡಿ ಮತ್ತು ಪ್ರತಿವಾದಿ 1½ ಅಡಿ ಜಾಗ ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಷಯವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಬಿಟ್ಟಿರುವ 1½ ಜಾಗವನ್ನು ಸಹ ಒತ್ತುವರಿ ಮಾಡಿ ಮನೆಯನ್ನು





ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ರ ಪ್ರಕಾರ ಪ್ರತಿವಾದಿಯವರಿಗೆ ಯಾವುದೇ ಜಾಗವನ್ನು ಬಿಡದೇ ಮನೆಯನ್ನು ನಿರ್ಮಿಸುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2005 ರಲ್ಲಿ ಬಂದಿರುತ್ತದೆ ಹಾಗೂ ಮನೆಯನ್ನು ಪ್ಲಾಸ್ಟರಿಂಗ್ ಮಾಡುವ ವೇಳೆ ಪ್ರತಿವಾದಿಯರು ತೊಂದರೆ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸಿಲ್ಲ ಹಾಗೂ ನಾನೇ ಜಾಗವನ್ನು ಒತ್ತುವರಿ ಮಾಡಿಕೊಂಡು ಅವರ ಮೇಲೆ ದೌರ್ಜನ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮ ದಿಕ್ಕಿನ ಪ್ರತಿವಾದಿಯ ಮನೆಯ 1½ ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿನಲ್ಲಿ ರುವ ಕಲ್ಲು ಬಂಡೆಯ ಕಾಂಪೌಂಡ್ ಅನ್ನು ಸುಮಾರು ವರ್ಷಗಳಿಂದ ಇಬ್ಬರು ಉಪಯೋಗಿಸುತ್ತಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಲ್ಲು ಬಂಡೆಯ ಕಾಂಪೌಂಡ್ ಪ್ರತಿವಾದಿಗೆ ಮಾತ್ರ

ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾಂಪೌಂಡ್ ಅನ್ನು ಜಂಟಿಯಾಗಿ ಅನುಭವಿಸುವ ಬಗ್ಗೆ ಯಾವುದೇ ಅಗ್ರಿಮೆಂಟ್ ನನ್ನ ಬಳಿ ಇಲ್ಲ. ಸದರಿ ಕಾಂಪೌಂಡ್ ಅನ್ನು ಜಂಟಿಯಾಗಿ ಅನುಭಸುತ್ತಾ ಬಂದಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಅಕ್ರಮವಾಗಿ ಮನೆಯ ಪಶ್ಚಿಮ ದಿಕ್ಕಿನಲ್ಲಿ ಕಾಂಪೌಂಡ್ ನಿರ್ಮಿಸಿರುತ್ತಾರೆ ಎಂದು ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ಫೋಟೋಗಳನ್ನು ನ್ಯಾಯಾಲಯಕ್ಕೆ ಇತ್ತೀಚಿಗೆ ಸಲ್ಲಿಸಿರುತ್ತೇನೆ. ಯಾವ ವರ್ಷ, ತಿಂಗಳು ಮತ್ತು ದಿನಾಂಕದಂದು ಪ್ರತಿವಾದಿಯು ಕಾಂಪೌಂಡ್ ನಿರ್ಮಿಸಲು ಮುಂದಾಗಿದ್ದರು ಎಂದರೆ ಸಾಕ್ಷಿಯು 2012 ನೇ ಸಾಲಿನಲ್ಲಿ ಎಂದು ನುಡಿಯುತ್ತಾರೆ. ಕಲ್ಲಿನ ಕಾಂಪೌಂಡ್ ಈಗಾಗಲೇ ಇದ್ದ ಕಾರಣ ಸದರಿ ಸಮಯದಲ್ಲಿ ಕಾಂಪೌಂಡ್ ನಿರ್ಮಿಸುವ ಅವಶ್ಯಕತೆ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಕಾಂಪೌಂಡ್ ಕಟ್ಟಲು ಮುಂದಾಗಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ಖಾಲಿ ಜಾಗಕ್ಕೆ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸಾಕ್ಷಿಯು ನಮಗೆ 1½ ಅಡಿ ಜಾಗ ಬರಬೇಕು, ಸದರಿ ಜಾಗದಲ್ಲಿ ಪೈಪ್ ಲೈನ್ ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 1½ ಅಡಿ ಜಾಗ ನಮಗೆ ಬರಬೇಕೆಂದು ಎಂದು ಪ್ರತಿವಾದಿಯ ಮೇಲೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ





ಎಂದರೆ ಸಾಕ್ಷಿಯು ನಮಗೆ 1½ ಅಡಿ ಜಾಗ ನಮಗೆ ಸೇರಿದ್ದು ಅದನ್ನು ಉಪಯೋಗಿಸಲು ಪ್ರತಿವಾದಿಯು ತೊಂದರೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಪೈಪ್ ಲೈನ್ ಹಾಕಿರುವ ಜಾಗ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕಿಲ್ಲದಿದ್ದರು ನಮಗೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.18 ದಾಖಲೆಯನ್ನು ನಾನೇ ಹಾಕಿರುತ್ತೇನೆ. ಸಿವಿಲ್ ನ್ಯಾಯಾಲಯ ಕಿರಿಯ ವಿಭಾಗ, ಚಳ್ಳಕೆರೆ ನ್ಯಾಯಾಲಯದ ಓ.ಎಸ್.154/2002 ದಾವೆಯಲ್ಲಿ ಜಿ.ಆರ್. ಅಶ್ವಥನಾಯಕ ಪ್ರತಿವಾದಿ ಹೊನ್ನಮ್ಮರವರ ಪರ ವಕೀಲರಾಗಿದ್ದು ಈಗ ಈ ದಾವೆಯಲ್ಲಿ ನನ್ನ ಪರ ವಕೀಲರಾಗಿದ್ದಾರೆ ಎಂದರೆ ಸರಿ. ನಿಪಿ.18 ರಲ್ಲಿನ ದಾವಾ ಸ್ವತ್ತು ಹಾಗೂ ಈ ದಾವೆಯಲ್ಲಿನ

ಕೌಂಟರ್ ಕ್ಲೈಮ್ ಸ್ವತ್ತುಗಳು ಎರಡು ಒಂದೇ ಎಂದರೆ ನನಗೆ ಗೊತ್ತಿಲ್ಲ. ದಾಖಲೆ ಪ್ರಕಾರ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಯರು ಕೌಂಟರ್ ಕ್ಲೈಮ್ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಕೌಂಟರ್ ಕ್ಲೈಮ್ ನ ಸ್ವತ್ತಿನ ಹಕ್ಕು, ಅಧಿಕಾರ ಮತ್ತು ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಪ್ರಶ್ನೆ ಅರ್ಥವಾಗುವುದಿಲ್ಲ ಎಂದು ನುಡಿಯುತ್ತಾರೆ. ಕೌಂಟರ್ ಕ್ಲೈಮ್ ನ ಸ್ವತ್ತು ಪ್ರತಿವಾದಿಗೆ ಸೇರುತ್ತದೆ ಎಂದರೆ ಸಾಕ್ಷಿಯು ಪೂರ್ವ–ಪಶ್ಚಿಮ 98½ ಅಡಿ ಜಾಗ ಅವರಿಗೆ ಸೇರಿರುತ್ತದೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಪ್ರತಿವಾದಿಯ ಕೌಂಟರ್ ಕ್ಲೈಮ್ ಸ್ವತ್ತಿನ ಕ್ರಯ ಪತ್ರವನ್ನು ನೋಡಿ ಅದರಲ್ಲಿರುವ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 100 ಅಡಿ ನಮೂದಾಗಿರುತ್ತದೆ ಎಂಬುದನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ.4 ಅಂತಾ ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಅದರಲ್ಲಿ ತಪ್ಪಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ತಪ್ಪಾಗಿ ನಮೂದಾಗಿರುವ ಬಗ್ಗೆ 1976 ನೇ ಇಸ್ವಿಯಿಂದಲೂ ನಾನು ಯಾವುದೇ ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಿಡಿ.4 ರ ಪತ್ರದಲ್ಲಿ ನಮೂದಾಗಿರುವುದು ತಪ್ಪು ಎಂದು ಹೇಳುತ್ತಿಲ್ಲ ಬಂಡೆ ವರೆಗಿನ ಜಾಗ ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಬಂಡೆ ವರೆಗಿನ ಜಾಗ ನಮಗೆ ಸೇರಿದ್ದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಂಡೆಯ ಜಾಗ ಪ್ರತಿವಾದಿಗೆ ಸೇರಿದ್ದು, ಬಂಡೆಯ ನಂತರ





1½ ಅಡಿ ಜಾಗ ಸಹ ಪ್ರತಿವಾದಿಗೆ ಸೇರುತ್ತದೆ ಎಂದರೆ ಸುಳ್ಳು. ಸದರಿ ಜಾಗದಲ್ಲಿ ಪ್ರತಿವಾದಿಯವರೇ ಸ್ವಾಧೀನಾನುಭವವನ್ನು ಹೊಂದಿದ್ದಾರೆ ಎಂದರೆ ಸಾಕ್ಷಿಯು 1969 ಸಾಲಿನಲ್ಲಿ ನಮ್ಮ ಮನೆಯನ್ನು ಖರೀದಿಸಿದ್ದು ಅಲ್ಲಿಂದಲೂ ಬಂಡೆಯ ಜಾಗವನ್ನು ನಾವು ಅನುಭವಿಸುತ್ತಿದ್ದೇವೆ. ನಮ್ಮ ಮನೆಯ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದು ಸುಳ್ಳು ಎಂದರೆ ನನಗೆ ನೆನಪಿಲ್ಲ. ನಮ್ಮ ಮನೆಯ ಕ್ರಯ ಪತ್ರದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಮ್ಮ ಮನೆಯ ಒಟ್ಟು ವಿಸ್ತೀರ್ಣ ಪೂರ್ವ - ಪಶ್ಚಿಮ 95, ಉತ್ತರ – ದಕ್ಷಿಣ 100 ಅಡಿಗಳು, ಇದರ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಹಾಲಿ ಪ್ರತಿವಾದಿಯರ ಜಾಗ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಕನ್ಸರ್ ವೇಷನ್. ಆಗಿನಿಂದಂಲೂ ಪಶ್ಚಿಮದಲ್ಲಿ ಕಲ್ಲಿನ ಬಂಡೆ ಇರುತ್ತದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಸಿದಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು

ಹಾಜರು ಮಾಡುವ ಪ್ರಶ್ನೆ ಉದ್ಭವಿಸಿಲ್ಲ ಎಂದು ನುಡಿಯುತ್ತಾರೆ. ಕೌಂಟರ್ ಕ್ಲೈಮ್ ಸ್ವತ್ತನ್ನು ಪ್ರತಿವಾದಿಯರು ಸಂಪೂರ್ಣ ಮಾಲೀಕತ್ವ ಮತ್ತು ಶಾಂತಿಯುತ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸಾಕ್ಷಿಯು 1½ ಅಡಿ ಜಾಗವನ್ನು ಹೊರತು ಪಡಿಸಿ ಅನುಭವಿಸುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ತಮ್ಮ ವಾಸದ ಮನೆಯ ಸುರಕ್ಷತೆಗಾಗಿ 1½ ಅಡಿ ಜಾಗವನ್ನು ಬಿಟ್ಟು ಕಲ್ಲು ಬಂಡೆ ಕಾಂಪೌಡ್ ಅನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಸದರಿ ಮನೆಯನ್ನು ಖರೀದಿಸುವ ಮೊದಲಿನಿಂದಲೂ ಕಲ್ಲು ಬಂಡೆ ಕಾಪೌಂಡ್ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಯು ಸಲ್ಲಿಸಿರುವ ಕೌಂಟರ್ ಕ್ಲೈಮ್ ಸ್ವತ್ತಿಗೆ ಅವರಿಗೆ ಹಕ್ಕಿದೆ ಹಾಗೂ ಕಲ್ಲು ಬಂಡೆ ನಂತರದ 1½ ಅಡಿ ಜಾಗಕ್ಕೆ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 1½ ಅಡಿ ಜಾಗ ಪ್ರತಿವಾದಿಗೆ ಸೇರಿದ ಕನ್ಸರ್ವೇಷನ್ ಜಾಗ ಎಂದರೆ ನಾವು ಅದರಲ್ಲಿ ಪೈಪ್ ಲೈನ್ ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕನ್ಸರ್ವೇಷನ್ ಜಾಗದಲ್ಲಿ ನನಗೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ಖಾಲಿ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 1½ ಅಡಿ ಕನ್ಸ್ವರ್ವೇಷನ್ ಜಾಗದಲ್ಲಿ 2012 ರಲ್ಲಿ ಮನೆ ಕಟ್ಟಲು ಪ್ರಯತ್ನಿಸಿರುತ್ತೇನೆ ಎಂದರೆ ಸಾಕ್ಷಿಯು ನಮಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯನ್ನು ಹಾಕುವ ಸಮಯದಲ್ಲಿ ಪ್ರತಿವಾದಿಗೆ 90 ವರ್ಷ ಹಾಗೂ ಅವರ ಗಂಡನಿಗೆ 95 ವರ್ಷ ಆಗಿತ್ತು ಎಂದರೆ





ಇರಬಹುದು. ಪ್ರತಿವಾದಿ ಮತ್ತು ಅವರ ಗಂಡನಿಗೆ ವಯಸ್ಸಾಗಿದ್ದರು 2012 ಸೆಪ್ಟಂಬರ್ ಮಾಹೆಯ ಮೊದಲನೇ ವಾರದಲ್ಲಿ ಪ್ರತಿವಾದಿಗೆ ಸೇರಿರುವ 1 ½ ಅಡಿ ಜಾಗವನ್ನು ನಾನು ಮತ್ತು ನಾನು ನನ್ನ ಬೆಂಬಲಿಗರು ಅಕ್ರಮವಾಗಿ ಒತ್ತು ವರಿ ಮಾಡಿ ಪ್ರತಿವಾದಿಯರು ನೆಟ್ಟಿರುವ ಕಲ್ಲು ಬಂಡೆಗಳನ್ನು ಕಿತ್ತು ಹಾಕಲು ಪ್ರಯತ್ನಿಸಿ ಕೌಂಟರ್ ಕ್ಲೈಮ್ ಷೆಡ್ಯೂಲ್ ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಡ ಕಟ್ಟಲು ಪ್ರಯತ್ನಿಸಿ ಪ್ರತಿವಾದಿಯ ಕೌಂಟರ್ ಕ್ಲೈಮ್ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕ ಉಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.